ಬಂದವರು ಕೊಡಗಳನ್ನು ಬಾವಿಗೆ ಬಿಟ್ಟು ನೀರು ತುಂಬಿಸಿಕೊಳ್ಳತೊಡಗಿದರು. ಆಗ ಕಪ್ಪೆ ತಾನು ಅಡಗಿ ಕುಳಿತಿದ್ದ ಕೊಡದಿಂದ ಈಚೆಗೆ ಬಂದು, ನೀರಿನ ತಳಕ್ಕೆ ಸೇರಿತು. ನಂತರ ಹುಡುಗಿಯರು ನೀರು ತುಂಬಿದ ಕೊಡಗಳನ್ನು ಹೊತ್ತು ಆಗಸಕ್ಕೆ ಮರಳಿದರು.

ನಂತರ ಕಪ್ಪೆ ಬಾವಿಯೊಳಗಿನಿಂದ ಹೊರಬಂದು ಬಿರುಬಿರನೆ ತನ್ನ ಊರಿಗೆ ಹೋಯಿತು. ಸ್ವಲ್ಪ ಹೊತ್ತು ಅಲ್ಲಿ ತನ್ನ ಮನೆಯಲ್ಲೇ ಸಮಾಧಾನದಿಂದ ಇದ್ದು ಬಿಟ್ಟಿತು.

ಮುಸ್ಸಂಜೆ ಮಾಡಿಕೊಂಡು ಕಪ್ಪೆ ಕಿಮನ್ಯೂಜ್‌ನ ಮಗನ ಮನೆಗೆ ಹೊರಟಿತು. ಬಂದು ಅದು, 'ನಾನು ಈಗ ಕಾಗದ ತಂದಿದ್ದೇನೆ' ಎನ್ನುತ್ತಾ, ಬಾಗಿಲು ಬಡಿಯಿತು. 'ಯಾರದು?' ಎಂದು ಕೂಗಿದನು ಒಳಗಿನಿಂದಲೇ ಕಿಮನ್ಯೂಜ್‌ನ ಮಗ.

ಆಗ ಕಪ್ಪೆ, 'ನಾನು ಮೈನು, ಕಪ್ಪೆ' ಎಂದಿತು. ಆಗ ಆತ ತಾನು ಮಲಗಿದ್ದ ಹಾಸಿಗೆಯಿಂದ ಎದ್ದು, ತನ್ನ ಕಾಗದದ ಬಗ್ಗೆ ನೆನಪಿಸಿಕೊಂಡು ಹೋಗಿ ಬಾಗಿಲು ತೆಗೆದು, 'ಒಳಗೆ ಬಾ' ಎಂದು ಕಪ್ಪೆಯನ್ನು ಕರೆದುಕೊಂಡನು.

ಕಪ್ಪೆ ತಾನು ತಂದಿದ್ದ ಕಾಗದವನ್ನು ಆತನ ಕೈಗೆ ಕೊಟ್ಟು ಹೊರಟು ಹೋಯಿತು. ಆಮೇಲೆ ಆತ ಆ ಕಾಗದವನ್ನು ಒಡೆದು ಓದಿದ. ಸೂರ್ಯದೇವನ ಉತ್ತರದಿಂದ ಆತನಿಗೆ ಸ್ವಲ್ಪ ಖುಷಿಯಾಯ್ತು. ಆಗ ಆತ ತನಗೆ ತಾನೇ, 'ಅಂದು ಕಪ್ಪೆ, ನಾನು ಅಲ್ಲಿಗೆ ಹೋಗೇ ಹೋಗ್ತೇನೆ ಅಂತ ನನಗೆ ಹೇಳಿದ್ದು ಈಗ ನಿಜವಾಯ್ತು' ಅಂದುಕೊಂಡು ಹೋಗಿ ಹಾಸಿಗೆಯಲ್ಲಿ ಉರುಳಿಕೊಂಡನು.

ಮಾರನೆಯ ಬೆಳಿಗ್ಗೆ ಆತ ನಲ್ವತ್ತು ಮಕ್ಯೂಟಸ್‌ನ್ನು (ಹಣ) ತೆಗೆದುಕೊಂಡು ಸೂರ್ಯದೇವನಿಗೆ ಒಂದು ಕಾಗದವನ್ನು ಬರೆದನು: 'ಲಾರ್ಡ್ ಸೂರ್ಯ ಮತ್ತು ಲೇಡಿ ಚಂದ್ರಮ ಅವರೇ, ಮೊದಲನೆಯದಾಗಿ ನಾನು ಇಲ್ಲಿ ಭೂಮಿಯ ಮೇಲೆ ವಾಸಿಸುವ ಜೀವಿ. ಈ ಭೂಮಿಯ ಮೇಲೇ ನಾನು ಉಸಿರಾಡಲು ಬಯಸುತ್ತೇನೆ. ನೀವು ಅಲ್ಲಿ ಮೇಲೆ ಆಗಸದಲ್ಲಿ ಇರುವವರು. ನಿಮ್ಮ ಮಗಳ ಓಲೈಕೆಗಾಗಿ ನಾನು ನಿಮಗೆ ಎಷ್ಟು ಮೊತ್ತ ಮಕ್ಯೂಟಸ್ ಕೊಡಬೇಕೆಂಬುದನ್ನು ತಿಳಿಸಿ' ಎಂದು ಆ ಕಾಗದದಲ್ಲಿ ಬರೆದು ಕಪ್ಪೆಯನ್ನು ಕರೆದನು. ಕಪ್ಪೆ ಬಂತು. ಅದರ ಕೈಯಲ್ಲಿ ಆ ಕಾಗದ ಮತ್ತು ಆ ನಲ್ವತ್ತು ಮಕ್ಯೂಟಸ್ ಹಣವನ್ನು ಕೊಟ್ಟು, 'ಇವುಗಳನ್ನು ತೆಗೆದುಕೊಂಡು ಹೋಗು' ಎಂದು ಹೇಳಿದನು.

ಅಲ್ಲಿಂದ ಕಪ್ಪೆ ಅವನು ಕೊಟ್ಟ ವಸ್ತುಗಳನ್ನು ತೆಗೆದುಕೊಂಡು ಬೇಗಬೇಗನೆ ಬಾವಿಯ ಬಳಿಗೆ ಬಂದಿತು. ಬಾವಿಯೊಳಕ್ಕೆ ತಳಕ್ಕೆ ಹೋಗಿ ಅಲ್ಲಿ ಶಾಂತಚಿತ್ತದಿಂದ ಕುಳಿತಿತು.

ಎಂದಿನಂತೆ ಆ ಹುಡುಗಿಯರು ಆಗಸದಿಂದ ನೀರು ತೆಗೆದುಕೊಂಡು ಹೋಗಲು ಬಾವಿಗೆ ಬಂದರು. ಬಂದವರೇ ಬಾವಿಗೆ ಕೊಡಗಳನ್ನು ಬಿಟ್ಟರು. ಆಗ ಕಪ್ಪೆ ಅವರಲ್ಲಿ ಒಬ್ಬಳ ಕೊಡದೊಳಕ್ಕೆ ಹೋಗಿ ಕುಳಿತಿತು. ಅನಂತರ ಆ ಹುಡುಗಿಯರು ನೀರು ತುಂಬಿದ ಆ ಕೊಡಗಳನ್ನು ಹೊತ್ತು ಆಗಸಕ್ಕೆ ಹೊರಟರು. ಹೋಗಿ ಮಾಮೂಲು ಜಾಗದಲ್ಲಿ ಆ ಕೊಡಗಳನ್ನು ಇಟ್ಟು ಹೋದರು.

ಕಪ್ಪೆ ಎಂದಿನಂತೆ ಅ ಕೊಡದಿಂದ ಹೊರಬಂದು ತಾನು ತಂದಿದ್ದ ಕಾಗದ ಮತ್ತು ಹಣವನ್ನು ಆ ಕೋಣೆಯಲ್ಲಿದ್ದ ಮೇಜಿನ ಮೇಲೆ ಇಟ್ಟು ಮೂಲೆಯಲ್ಲಿ ಹೋಗಿ ಅಡಗಿಕೊಂಡಿತು.

ಸ್ವಲ್ಪ ಸಮಯದ ನಂತರ ಸೂರ್ಯದೇವ ಅಲ್ಲಿಗೆ ಬಂದ. ಮೇಜಿನ ಮೇಲಿದ್ದ ಕಾಗದ ನೋಡಿ ಅಲ್ಲಿದ್ದ ಹಣವನ್ನು ತೆಗೆದುಕೊಂಡ. ಆ ಕಾಗದವನ್ನು ಒಡೆದು ಓದಿದ. ಅನಂತರ ತನ್ನ ಹೆಂಡತಿ ಚಂದ್ರಮಳನ್ನು ಕರೆದು, ಭಾವೀ ಅಳಿಯನಿಂದ ಬಂದಿರುವ ಕಾಗದದಲ್ಲಿದ್ದ ವಿಷಯವನ್ನು ಹೇಳಿದ. ಅದಕ್ಕೆ ಅವನ ಹೆಂಡತಿಯೂ ತನ್ನ ಒಪ್ಪಿಗೆ ಸೂಚಿಸಿದಳು. ಆಗ ಸೂರ್ಯದೇವ 'ಈ ಕಾಗದದ ಜೊತೆ ಯಾರು ಬಂದಿದ್ದಾರೆ? ನನಗೆ ಗೊತ್ತಾಗುತ್ತಿಲ್ಲ, ಅವರಿಗೆ ಹೇಗೆ ನಾವು ಏನು ಊಟವನ್ನು ಸಿದ್ಧಪಡಿಸುವುದು?' ಎಂದು ತನ್ನ ಹೆಂಡತಿಗೆ ಕೇಳಿದ.

'ಅದು ದೊಡ್ಡ ವಿಷಯವಲ್ಲ ಬಿಡಿ. ಏನಾದರೂ ಒಂದಡುಗೆ ಮಾಡಿದರೆ ಆಯ್ತು, ಈ ಕಾಗದ ಕೂಡ ಆ ಮೇಜಿನ ಮೇಲೆ ಇತ್ತಲ್ಲ; ಹಾಗೆ ನಾವೂ ಅಡುಗೆಯನ್ನು ಮಾಡಿ ಅದನ್ನು ಆ ಮೇಜಿನ ಮೇಲೆಯೇ ಇಡುವ' ಎಂದಳು ಆತನ ಹೆಂಡತಿ.

'ಆಗಬಹುದು. ನಿನ್ನ ಆಲೋಚನೆ ಸರಿಯಾಗಿಯೇ ಇದೆ' ಎಂದ ಹೆಂಡತಿಗೆ ಸೂರ್ಯದೇವ.